ಇಂದು ದಿಃ **16-07-2024** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ.ಕೆ.ಸಿ ವಕೀಲರಿಂದ ಶ್ರೀ ಎಸ್.ಕೆ ವಕೀಲರ ಪರ 6 ನೇ ಪ್ರತಿವಾದಿ ಪರಃ**

ನಾನು ಈ ದಾವೆಯನ್ನು 2 ಎಕರೆ 20 ಗುಂಟೆ ಮತ್ತು 4 ಎಕರೆ 24 ಗುಂಟೆ ಕುರಿತು ಮಾಡಿರುತ್ತೇನೆ. ಈ ದಾವೆ ದಾಖಲು ಮಾಡುವ ಸಮಯದಲ್ಲಿ ನಾನೇ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ. ದಾವಾ ಆಸ್ತಿಗಳು ನನ್ನ ದೊಡ್ಡಪ್ಪನಿಂದ ಬಂದಿರುತ್ತವೆ. ಮರಿಬಸಪ್ಪ ಬಿನ್ ಬಸಲಿಂಗಪ್ಪ ನನ್ನ ದೊಡ್ಡಪ್ಪ ಇರುತ್ತಾನೆ. ಬಸಪ್ಪ ನನ್ನ ತಂದೆ ಇರುತ್ತಾನೆ. ನನ್ನ ತಂದೆ ಮರಿಬಸಪ್ಪ ಇವನಿಗೆ ದಾವಾ ಬಿ ಶೆಡ್ಯೂಲ್ ಆಸ್ತಿಯನ್ನು ಜೀವನಾಂಶಕ್ಕೆ ಕೊಟ್ಟಿದ್ದನು ಎಂದರೆ ಸರಿ. ಆ ಕಾರಣದಿಂದ ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಬಾನುಹಳ್ಳಿಯ ವಾಸಿ ಇರುತ್ತಾನೆ. ಆತನಿಗೆ ಸುಮಾರು 70 ವರ್ಷ ವಯಸ್ಸು ಎಂದರೆ ಸರಿ. ನಾನು ಮತ್ತು ನನ್ನ ಸಹೋದರರು ಬಹಳ ವರ್ಷಗಳ ಹಿಂದಯೇ ಬೇರೆ ಬೇರೆ ವಾಸ ಇದ್ದೇವೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿದ್ದಾನೆ ಎಂದು ನನಗೆ ಮಾಹಿತಿ ಇದೆ. ದಿನಾಂಕಃ08-11-1995 ರಂದು 6 ನೇ ಪ್ರತಿವಾದಿಯ ತಂದೆ ನನ್ನ ತಂದೆಯ ಕಡೆಯಿಂದ ಸರ್ವೆ ನಂಬರ್-22/2 ರಲ್ಲಿ 1 ಎಕರೆ ಜಮೀನನ್ನು ಖರೀದಿಸಿದ್ದನು ಎಂದರೆ ಸರಿಯಲ್ಲ. ಖರೀದಿ ಆದ ನಂತರ 6 ನೇ ಪ್ರತಿವಾದಿಯ ತಂದೆಯ ಹೆಸರಿಗೆ ಪಹಣಿ ಮತ್ತು ಮುಟೇಷನ್ ಆಗಿರುತ್ತದೆ ಎಂದರೆ ಸರಿಯಲ್ಲ. ಮಲ್ಲಪ್ಪ ಇವನು ಈ 1 ಎಕರೆ ಜಮೀನಿನ ಸ್ವಾಧೀನ ಹೊಂದಿದ್ದನು ಎಂದರೆ ಸರಿಯಲ್ಲ. 1996 ರಿಂದ 6 ನೇ ಪ್ರತಿವಾದಿಯ ಹೆಸರು ಈ 1 ಎಕರೆಗೆ ದಾಖಲಾಗಿದೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ 1996 ರಿಂದ ಇಲ್ಲಿಯವರೆಗೆ ಈ 1 ಎಕರೆ ಆಸ್ತಿಯ ಸ್ವಾಧೀನದಲ್ಲಿದ್ದು, ಆತನೇ ಉಳುಮೆ

ಮಾಡುತ್ತಾನೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ದಿನಾಂಕಃ08-11-1995 ರ ಖರೀದಿ ಪತ್ರ ರದ್ದು ಮಾಡಲು ಕೇಳಿಕೊಂಡಿದ್ದೇನೆ. 6 ನೇ ಪ್ರತಿವಾದಿಯ ಹೆಸರಿಗೆ ಈಗಲೂ ಕಂದಾಯ ದಾಖಲೆಗಳು 1 ಎಕರೆ ಜಮೀನಿಗೆ ಇವೆ ಎಂದರೆ ಸಾಕ್ಷಿ ಖೊಟ್ಟಿಯಾಗಿ ದಾಖಲೆ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಾನು 6 ನೇ ಪ್ರತಿವಾದಿಯ ಹೆಸರು ದಾಖಲಾಗಿರುವ ಬಗ್ಗೆ ಕಂದಾಯ ಅಪೀಲು ಮಾಡಿಲ್ಲ ಸಾಕ್ಷಿ ಈಗ ಗೊತ್ತಾಗಿದೆ ಎಂದು ಹೇಳುತ್ತಾರೆ. 2019 ರಲ್ಲಿ 1 ಎಕರೆ ಜಮೀನಿನ ಮೌಲ್ಯ ಸುಮಾರು 10 ಲಕ್ಷ ಇತ್ತು ಎಂದರೆ ಗೊತ್ತಿಲ್ಲ.

**ಮುಂದಿನ ಪಾಟೀ ಸವಾಲಿಗೆ ಸಮಯ ಕೇಳಿದ್ದು, ಸಕಾರಣ ಇಲ್ಲದೇ ಸಮಯ ಕೇಳಿದ ಕಾರಣ ಮುಂದಿನ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.